ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1011
ಉತ್ತರಿಸಬೇಕಾದ ದಿನಾಂಕ	:	22.12.2021
ಉತ್ತರಿಸುವ ಸಚಿವರು	:	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಕಳೆದ 3 ವರ್ಷಗಳಿಂದ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ನಿರ್ಮಾಣ ಮಾಡಿರುವ ಮನೆಗಳ ಸಂಖ್ಯೆ ಎಷ್ಟು; ಎಲ್ಲೆಲ್ಲಿ ನಿರ್ಮಿಸಲಾಗಿದೆ; (ವಿವರ ನೀಡುವುದು)	ಕಳೆದ 3 ವರ್ಷಗಳಿಂದ ಕರ್ನಾಟಕ ಗೃಹ ಮಂಡಳಿಯಿಂದ 2512 ಮನೆಗಳನ್ನು ನಿರ್ಮಾಣ ಮಾಡಿದ್ದು ವಿವರವನ್ನು ಅನುಬಂಧದಲ್ಲಿ ನೀಡಿದೆ.
ಆ	ನಿರ್ಮಾಣಗೊಂಡ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ; ಉಳಿದಿರುವ ಮನೆಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು; ಹಂಚಿಕೆ ಮಾಡಲು ಇರುವ ಮಾನದಂಡಗಳೇನು?	ನಿರ್ಮಾಣ ಮಾಡಿರುವ 2512 ಮನೆಗಳ ಪೈಕಿ 1927 ಮನೆ / ಫ್ಲಾಟ್‌ಗಳನ್ನು ಹಂಚಿಕೆ ಮಾಡಲಾಗಿದೆ. ರಾಜ್ಯದಾದ್ಯಂತ ವಿವಿಧ ಬಡಾವಣೆಗಳಲ್ಲಿ ಉಳಿದಿರುವ ಮನೆ / ಫ್ಲಾಟ್‌ಗಳನ್ನು ವಿಲೇವಾರಿ ಮಾಡುವ ಸಲುವಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಹಾಗೂ ಇನ್ನೂ ಕೆಲವು ಬಡಾವಣೆಗಳಲ್ಲಿ ಮನೆ / ಫ್ಲಾಟ್‌ಗಳ ವಿಲೇವಾರಿಗೆ ಪತ್ರಿಕಾ ಪ್ರಕಟಣೆ ನೀಡಿ, ಆನ್‌ಲೈನ್ ಮೂಲಕ ಆರಂಭಿಕ ಠೇವಣಿಯೊಂದಿಗೆ ಅರ್ಜಿಗಳನ್ನು ಆಹ್ವಾನಿಸಲಾಗುವುದು. ಪ್ರಕಟಣೆಗೆ ಅನುಗುಣವಾಗಿ ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲಿಸಿ, ಕರ್ನಾಟಕ ಗೃಹ ಮಂಡಳಿಯಿಂದ ನಿಯಮಾನುಸಾರ ಲಾಟರಿ ಮುಖಾಂತರ ಹಂಚಿಕೆಗೆ ಕ್ರಮ ವಹಿಸಲಾಗುವುದು.

(ಸಂಖ್ಯೆ: ವಇ 196 ಕಗೃಮಂ 2021)

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

ಅನುಬಂಧ

ಮಾನ್ಯ ಪರಿಷತ್ತಿನ ಸಭೆಯ ಸದಸ್ಯರಾದ ಶ್ರೀ. ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು) ರವರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1011 ಕ್ಕೆ ಅನುಬಂಧ

ಕ್ರ. ಸಂ.	ಸ್ಥಳ	ಜಿಲ್ಲೆಯ ಹೆಸರು	ಮನೆಗಳು	ಹಂಚಿಕೆಯಾದ ಮನೆಗಳು
	225 ವಸತಿ ಯೋಜನೆಗಳು – (2018–19)			
1	ಸಂಯುಕ್ತ ವಸತಿಯೋಜನೆ ಸೂರ್ಯನಗರ 3ನೇ ಹಂತ ಆನೇಕಲ್ ತಾಲ್ಲೂಕು	ಬೆಂಗಳೂರು ನಗರ	660	656
2	ಸಂಯುಕ್ತ ವಸತಿ ಯೋಜನೆ ಮುದ್ದಾಪುರ ಕರೇನಹಳ್ಳಿ ಬಿಡದಿ ಹೋಬಳಿ, ರಾಮನಗರ ಜಿಲ್ಲೆ.	ರಾಮನಗರ	9	5
3	ಸಂಯುಕ್ತ ವಸತಿ ಯೋಜನೆ ಗುನ್ನಳ್ಳಿ , ಬೀದರ್	ಬೀದರ್	28	13
4	ಸಂಯುಕ್ತ ವಸತಿ ಯೋಜನೆ ಇಲವಾಲ ಮೈಸೂರು	ಮೈಸೂರು	207	82
5	ಸಂಯುಕ್ತ ವಸತಿ ಯೋಜನೆ ಹಿರೇಮಲ್ಲಿಗೆವಾಡ ಧಾರವಾಡ	ಧಾರವಾಡ	172	169
6	ಸಂಯುಕ್ತ ವಸತಿ ಯೋಜನೆ ಮಹಲ್ ಬಾಗಾಯಾತ್ ಫೇಸ್–1 , ವಿಜಯಪುರ	ವಿಜಯಪುರ	200	108
7	ಸಂಯುಕ್ತ ವಸತಿ ಯೋಜನೆ ಮುದ್ದೇಬಿಹಾಳ್, ವಿಜಯಪುರ	ವಿಜಯಪುರ	30	11
8	ಸಂಯುಕ್ತ ವಸತಿ ಯೋಜನೆ ಗುಲ್ಬರ್ಗಾ (ಶೇಖ್ ರೋಜಾ), ಕಲಬುರಗಿ	ಕಲಬುರಗಿ	832	607
	ಸಂಯುಕ್ತ ವಸತಿ ಯೋಜನೆ ಕಾಳಗನೂರು ಕುಸನೂರು ಫೇಸ್– 1, ಕಲಬುರಗಿ	ಕಲಬುರಗಿ	140	127
	2019–20			
9	ಬೀಳಗಿ, ಬಾಗಲಕೋಟೆ	ಬಾಗಲಕೋಟೆ	5	3
10	ಸಂಯುಕ್ತ ವಸತಿ ಯೋಜನೆ ಚಳ್ಳಕೆರೆ, ಚಿತ್ರದುರ್ಗ	ಚಿತ್ರದುರ್ಗ	18	18
11	ಸಂಯುಕ್ತ ವಸತಿ ಯೋಜನೆ ಮಾನ್ವಿ , ರಾಯಚೂರು	ರಾಯಚೂರು	71	25
12	ಸಂಯುಕ್ತ ವಸತಿ ಯೋಜನೆ ಕಂಚಲಗೂಡು, ಜಯಪುರ ಹೋಬಳಿ, ಮೈಸೂರು	ಮೈಸೂರು	50	49
13	ಸಂಯುಕ್ತ ವಸತಿ ಯೋಜನೆ ಬಳ್ಳಾರಿ	ಬಳ್ಳಾರಿ	50	14
	2020–21			
14	ಸಂಯುಕ್ತ ವಸತಿ ಯೋಜನೆ ಗೋಕಾಕ್ 1ನೇ ಹಂತ, ಬೆಳಗಾವಿ	ಬೆಳಗಾವಿ	40	40
	ಒಟ್ಟು		2512	1927

NOTE: THE ABOVE DETAILS IS AS RECORDED IN DATABASE.

ಉಪ ಪ್ರಧಾನ ವ್ಯವಸ್ಥಾಪಕರು (ಪ್ರ.ಸೇ)
ಕರ್ನಾಟಕ ಗೃಹ ಮಂಡಳಿ
ಬೆಂಗಳೂರು.